# ಗರ್ಭಪಾತಕ್ಕೆ ಕಾರಣವಾಗುವ ಗರ್ಭಕಂಠದ ಅಸಮರ್ಥತೆ ಸೂಕ್ತ ತಪಾಸಣೆ ಮತ್ತು ಚಿಕಿತ್ಸೆಯಿಂದ ಪರಿಹಾರ

ಗೌರಿ ಮದುವೆಯಾದ 8 ವರ್ಷಗಳಲ್ಲಿ 8 ಗರ್ಭವನ್ನು ಕಳೆದುಕೊಂಡಿದ್ದರು. ಅವುಗಳಲ್ಲಿ ಮೊದಲ ನಾಲ್ಕು ಗರ್ಭಪಾತವು ಮೊದಲ ತ್ರೈಮಾಸಿಕದಲ್ಲಿ ಮತ್ತು ಉಳಿದ ನಾಲ್ಕು ಗರ್ಭಪಾತವು 4 ರಿಂದ 8 ತಿಂಗಳ ನಡುವೆ ಸಂಭವಿಸಿದ್ದವು. ಹಿಂದಿನ ಗರ್ಭಧಾರಣೆಯಲ್ಲಿ ಆಕೆಗೆ 3–7 ತಿಂಗಳ ನಡುವೆ ಗರ್ಭಪಾತವಾದ ಹಿನ್ನಲೆಯಲ್ಲಿ, ಕೊಬ್ಬೊಟ್ಟೆಯ ಮುಖಾಂತರ ಗರ್ಭಕಂಠಕ್ಕೆ ಹೊಲಿಗೆ ಹಾಕಲಾಯಿತು.

ನಂತರ ಆಕೆಯು 9ನೆಯ ಬಾರಿ ಗರ್ಭಿಣಿಯಾಗಿದ್ದಳು. ಕಿಬ್ಬೊಟ್ಟೆಯ ಮೂಲಕ ಹಾಕಲಾದ ಹೊಲಿಗೆ ಹಾಗೆಯೆ ಇತ್ತು. ಗರ್ಭಾಶಯದಲ್ಲಿ ಭ್ರೂಣವು ನೆಲೆಗೊಳ್ಳುವುದು ನಿಶ್ಚಿತವಾಗುತ್ತದ್ದಂತೆಯೆ ಎಲ್ಎಮ್ಡಬ್ಲ್ಯು ಎಚ್ ಔಷಧಗಳನ್ನು ನೀಡಲು ಆರಂಭಿಸಲಾಯಿತು. ಗರ್ಭಧಾರಣೆಯ 24ನೆಯ ವಾರದಲ್ಲಿ ಆಕೆಗೆ ಅಧಿಕ ರಕ್ತದೊತ್ತಡ ಕಾಣಿಸಿಕೊಂಡಿತು. ಆಕೆಗೆ ರಕ್ತದೊತ್ತಡವನ್ನು ನಿಯಂತ್ರಣಕ್ಕೆ ತರುವ ಔಷಧಗಳನ್ನು ನೀಡಲಾಯಿತು. ಅಲ್ಲದೇ ಸ್ವಲ್ಪ ಪ್ರಮಾಣದ ಮಧುಮೇಹವು ಪತ್ತೆಯಾಯಿತು. 32ನೆಯ ವಾರದಲ್ಲಿ ನಡು ಮಿದುಳಿನ ಅಪಧಮನಿಯು ಅತಿಯಾದ ರಕ್ತದೊತ್ತಡದ ಕಾರಣದಿಂದ ನಿರೋಧಶಕ್ತಿಯನ್ನು ಕಳೆದುಕೊಳ್ಳುತ್ತಿರುವುದು ತಿಳಿಯಿತು. ಗರ್ಭಿಣಿಗೆ ಸಿಸೇರಿಯನ್ ಕ್ರಿಯೆಯ ಮೂಲಕ ಹೆರಿಗೆ ಮಾಡಿಸಲಾಯಿತು. ಆಕೆ 1.65 ಕೆಜಿ ತೂಕವಿರುವ ಗಂಡು ಮಗುವಿಗೆ ಜನ್ಮನೀಡಿದಳು. ಆಕೆಗೆ ಹಾಕಿದ ಹೊಲಿಗೆಯನ್ನು ಹಾಗೆಯೆ ಬಿಡಲಾಯಿತು. ಮಗು ಮತ್ತು ತಾಯಿ ಆರೋಗ್ಯದಿಂದಿದ್ದಾರೆ.

ಗರ್ಭಕಂಠದ ಅಸಮರ್ಥತೆಗೆ ಈ ಮೇಲಿನ ನಿದರ್ಶನ ಅನೇಕ ಗರ್ಭಿಣಿಯರಿಗೆ ಭರವಸೆ ನೀಡುತ್ತದೆ. ಗರ್ಭಕಂಠದ ಅಸಮರ್ಥತೆಯು ಗರ್ಭಧಾರಣೆಯ ಸಮಯದಲ್ಲಿ ಉದ್ಭವಿಸುವ ಒಂದು ತೊಡಕಾಗಿದ್ದು, ಮುಗುವು ಜನಿಸುವ ಸೂಕ್ತ ಸಮಯಕ್ಕಿಂತ ಮೊದಲೇ ಗರ್ಭಕಂಠವು ತೆರೆದುಕೊಳ್ಳಲು ಮತ್ತು ತೆಳುವಾಗಲು ಪ್ರಾರಂಭಿಸುತ್ತದೆ. ಅಸಮರ್ಥ ಗರ್ಭಕಂಠವು ಗರ್ಭಧಾರಣೆಯ ಎರಡನೇ ಮತ್ತು ಮೂರನೆ ತ್ರೈಮಾಸಿಕದಲ್ಲಿ ಗರ್ಭಪಾತ ಅಥವಾ ಅವಧಿಮುನ್ನ ಪ್ರಸವಕ್ಕೆ ಕಾರಣವಾಗಬಹುದು. ಅಸಮರ್ಥ ಗರ್ಭಾಶಯವನ್ನು ಹೊಂದಿರುವ ಮಹಿಳೆಯರಲ್ಲಿ ಗರ್ಭಕಂಠದ ತೆರೆಯುವಿಕೆ ಮತ್ತು ತೆಳ್ಳಗಾಗುವಿಕೆಯು ಯಾವುದೇ ನೋವು ಅಥವಾ ಗರ್ಭಾಶಯದ ಸಂಕೋಚನವಿಲ್ಲದೇ ಆರಂಭವಾಗಬಹುದು. ಸಾಮಾನ್ಯ



**ಡಾ॥ ದೇವಿಕಾ ಗುಣಶೀಲ**
**ಬಂಜೆತನ ಹಾಗೂ ಸ್ತ್ರೀರೋಗ ತಜ್ಞೆ**

**ಗರ್ಭಪಾತ ಸಂಭವಿಸುವುದಕ್ಕೆ ಇರಬಹುದಾದ ದೈಹಿಕ-ವೈಜ್ಞಾನಿಕ ಕಾರಣಗಳನ್ನು ಬೆಂಗಳೂರಿನ ಬಸವನಗುಡಿಯಲ್ಲಿರುವ ಗುಣಶೀಲ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ದೇವಿಕಾ ಗುಣಶೀಲ ಇಲ್ಲಿ ವಿವರವಾಗಿ ತಿಳಿಸಿಕೊಟ್ಟಿದ್ದಾರೆ.**

ಗರ್ಭಧಾರಣೆಯಲ್ಲಿ ಈ ಪ್ರಕ್ರಿಯೆಯು ಗರ್ಭಾಶಯದ ಸಂಕೋಚನಕ್ಕೆ ಪ್ರತಿಕ್ರಿಯೆಯಾಗಿ ಆರಂಭವಾಗುತ್ತದೆ. ಗರ್ಭವು ಬೆಳೆದಂತೆ ಮತ್ತು ಭ್ರೂಣದ ತೂಕವು ಹೆಚ್ಚಾದಂತೆಲ್ಲ ಉಂಟಾಗುವ ಅಧಿಕ ಒತ್ತಡದಿಂದ ದುರ್ಬಲವಾದ ಗರ್ಭಕಂಠವು ತೆರೆದುಕೊಳ್ಳುವುದರಿಂದ ಗರ್ಭಕಂಠದ ಅಸಮರ್ಥತೆಯು ಉಂಟಾಗುತ್ತದೆ. ಈ ಕ್ರಿಯೆಯನ್ನು ತಡೆಗಟ್ಟದಿದ್ದರೆ, ಮಗುವಿನ ಸುತ್ತಲೂ ಇರುವ ನೀರಿನ ಚೀಲವು ಒಡೆದು ಅವಧಿ ಮುನ್ನ ಪ್ರಸವವಾಗಬಹುದು.

ಗರ್ಭಕಂಠವು ಹಠಾತ್ತಾಗಿ ತೆರೆದುಕೊಳ್ಳಲು ಕಾರಣವಾಗುವ ಅಪಾಯದ ಅಂಶಗಳು: ಹಿಂದಿನ ಗರ್ಭಧಾರಣೆಯು, ಎರಡನೆಯ ಅಥವಾ ಮೂರನೆಯ ತ್ರೈಮಾಸಿಕದ ಆರಂಭದಲ್ಲಿ ಗರ್ಭಪಾತದಲ್ಲಿ ಕೊನೆಯಾಗಿದ್ದರೆ, (ಗರ್ಭಧಾರಣೆಯ 13–30 ನೆಯ ವಾರದ ನಡುವಿನಲ್ಲಿ), ಗರ್ಭಾಶಯದ ಕೊರಳಿನ ಶಸ್ತ್ರಕ್ರಿಯೆಯು ನಡೆದಿದ್ದರೆ, ಮತ್ತೆ ಮತ್ತೆ ಗರ್ಭಪಾತವಾಗಿದ್ದು, ಶಸ್ತ್ರಕ್ರಿಯೆಯ ಮೂಲಕ ಹೊರತೆಗೆಯಲಾಗಿದ್ದರೆ, ಗರ್ಭಾಶಯದ ಕೊರಳಿಗೆ ಆದ ಗಂಭೀರ ಪೆಟ್ಟಿನಿಂದ ಅದರ ಅಂಗಾಂಶಗಳು ದುರ್ಬಲಗೊಂಡಿದ್ದರೆ.

### ಇದನ್ನು ಹೇಗೆ ಪತ್ತೆ ಹಚ್ಚಲಾಗುತ್ತದೆ?:

ಈ ಹಿಂದಿನ ಗರ್ಭಧಾರಣೆಗಳ ಮಧ್ಯಭಾಗದಲ್ಲಿ ಉಂಟಾದ ಗರ್ಭಪಾತವು ಈ ಕುರಿತು ಸುಳಿವು ನೀಡುತ್ತದೆ. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ನಡೆಸಿದಾಗಲೂ ಕೆಲವು ಮಹತ್ವದ ಮಾಹಿತಿಗಳು ಉದಾಹರಣೆಗೆ, ಗರ್ಭಕಂಠದ ಉದ್ದ ಮತ್ತು ಮೇಲ್ಭಾಗದ ಕೊನೆಯಲ್ಲಿ ಏನಾದರೂ ತೆರೆದುಕೊಳ್ಳುತ್ತಿವೆಯೆ ಎಂದು ತಿಳಿಯುತ್ತದೆ. ಗರ್ಭಧಾರಣೆಯಾಗಿರದ ಸಂದರ್ಭದಲ್ಲಿ ಗರ್ಭಕಂಠವು ಎಷ್ಟು ಬಿಗಿಯಾಗಿದೆ ಯೆಂಬುದನ್ನು ಒಂದು ದೊಡ್ಡ ವಿಸ್ತಾರಕ (ಡೈಲೇಟರ್)ವನ್ನು ತೂರಿಸುವ ಮೂಲಕ ಅಳೆಯಲಾಗುತ್ತದೆ.

**ಚಿಕಿತ್ಸೆ:** ಒಮ್ಮೆ ಗರ್ಭಕಂಠದ ಅಸಮರ್ಥತೆಯು ಪತ್ತೆಯಾದ ನಂತರ ಗರ್ಭಕಂಠದ ಸುತ್ತಲೂ ಅದು ತೆರೆದುಕೊಳ್ಳದಂತೆ ಒಂದು ಅಥವಾ ಹೆಚ್ಚಿನ ಹೊಲಿಗೆ ಹಾಕುವ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಇದನ್ನು ಸಾಮಾನ್ಯವಾಗಿ 12 ವಾರಗಳ ನಂತರ ಮಹಿಳೆಯು ಬೇರೆ ಕಾರಣಗಳಿಂದ ಗರ್ಭಪಾತಕ್ಕೆ ಒಳಗಾಗುವ ಸಂಭವನೀಯತೆಯು ಕ್ಷೀಣಿಸಿದ ನಂತರ, ಗರ್ಭಕಂಠದ ಒಳಚರ್ಮ ಹರಿದಿರದಿದ್ದರೆ ಮತ್ತು ಯಾವುದೇ ಸೋಂಕಿಲ್ಲದಿರುವುದನ್ನು ಖಾತ್ರಿ ಪಡಿಸಿಕೊಂಡು ಹೊಲಿಗೆ ಹಾಕಲಾಗುವುದು. ಹೊಲಿಗೆಯ ನಂತರ ಮಹಿಳೆಗೆ ಈ ಶಸ್ತ್ರಕ್ರಿಯೆಯ ಕಾರಣದಿಂದ ಕೆಲವೊಮ್ಮೆ ಉಂಟಾಗಬಹುದಾದ ಸಂಕೋಚನ ಮತ್ತು ಸೋಂಕಿನ ಲಕ್ಷಣಗಳ ಕುರಿತು ತೀವ್ರ ನಿಗಾ ವಹಿಸಲಾಗುವುದು. ಕೆಳಗೆ ತಿಳಿಸಲಾದ ವಿಶೇಷ ಸಂದರ್ಭವನ್ನು ಹೊರತು ಪಡಿಸಿ ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯುವ ಅವಶ್ಯಕತೆಯಿರುವುದಿಲ್ಲ. ಅಂದರೆ, ಹೊಲಿಗೆ ಹಾಕಿರುವ ಹೊರತಾಗಿಯು ಮಹಿಳೆಯು ಮತ್ತೆ ಮತ್ತೆ ಗರ್ಭಧಾರಣೆಯ ಮಧ್ಯದಲ್ಲಿ ಗರ್ಭಪಾತಕ್ಕೆ ಒಳಗಾಗಿದ್ದರೆ, ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯುವ ಅಗತ್ಯವಿರುತ್ತದೆ. ಆಗ ಕಿಬ್ಬೊಟ್ಟೆಯ ಮೂಲಕ ಲ್ಯಾಪ್ರೊಸ್ಕೊಪಿ ವಿಧಾನದಿಂದ ಗರ್ಭಕಂಠದ ಮೇಲ್ಭಾಗದಲ್ಲಿ ಹೊಲಿಗೆ ಹಾಕಲಾಗುವುದು. ಇದು ಹೆಚ್ಚಾಗಿ ಅನುಸರಿಸುವ ಯೋನಿನಾಳದ ಮುಖಾಂತರ ಹಾಕುವ ಹೊಲಿಗೆಗಿಂತ ಸುರಕ್ಷಿತವಾಗಿದೆ.


**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:**

GUNASHEELA
Fertility Centre

**ಗುಣಶೀಲ ಫರ್ಟಿಲಿಟಿ ಸೆಂಟರ್**
**ಬಸವನಗುಡಿ, ಬೆಂಗಳೂರು,**
**ಫೋ: (080) 41312600/ 266735858**
**ಶಾಖೆ: ಕೋರಮಂಗಲ: ಫೋ: (080) 41712600**